**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ.</u>**

CC No.1006/2021
CW-12/ PW-6

ಹೆಸರು : ವಸೀಂರಾಜ ಮೊಹಮ್ಮದ ಇಸಾಕ್ ದಾನವಾಡ

ವಯಸ್ಸು : 47 ವರ್ಷ

ಉದ್ಯೋಗ : ಪೊಲೀಸ್ ಮುಖ್ಯ ಪೇದೆ, ಖಾನಾಪೂರ ಪೊಲೀಸ್ ಠಾಣೆ

ವಾಸಸ್ಥಳ : ಖಾನಾಪುರ.

**(ದಿನಾಂಕ 27.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ</u>**

1. ನಾನು 2019 ರಿಂದ 2023 ರವರೆಗೆ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 10.06.2021 ರಂದು ಸಾಯಂಕಾಲ 7-00 ಗಂಟೆಗೆ ತ್ರಿವಿಕ್ರಮ ಮನವಾಚಾರಿ, ಗಣಿ ಮತ್ತು ಭೂ ವಿಜ್ಞಾನಾಧಿಕಾರಿ ಠಾಣೆಗೆ ಹಾಜರಾಗಿ ಸರ್ಕಾರದ ಪರವಾಗಿ ಲಿಖಿತ ದೂರು ನೀಡಿದ್ದನು ಅದನ್ನು ಠಾಣೆಯ ಅಪರಾಧ ಸಂಖ್ಯೆಃ 106/2021 ರಂತೆ ಕಲಂ 143, 147, 148, 427, 353 ಸಹ ಕಲಂ 149 ಭಾ.ದಂ.ಸಂ. ಅಡಿಯಲ್ಲಿ ಹಾಗೂ ಕಲಂ 3 ಸಾರ್ವಜನಿಕ ಆಸ್ತಿ ಹಾನಿ ತಡೆಗಟ್ಟುವ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ 19-45 ಗಂಟೆಗೆ ಮೂಲ ಪ್ರಥಮ ವರ್ತಮಾನ ವರದಿಯನ್ನು ಸಿಪಿಸಿ 3075 ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದೂರನ್ನು ನಾನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿ.ಪಿ-1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನಾನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿ.ಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ಪ್ರಕರಣದ ಮುಂದಿನ ತನಿಖೆಯನ್ನು ಬಿ.ವಿ. ನ್ಯಾಮಗೌಡ, ಪಿ.ಎಸ್.ಐ ರವರಿಗೆ ವಹಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಃ ಆರ್.ಬಿ.ಸಿ ವಕೀಲರಿಂದ-</u>**

5. ಠಾಣೆಯಿಂದ ಹುಕ್ಕೇರಿ ನ್ಯಾಯಾಲಯ ಸುಮಾರು 15 ಕಿ.ಮೀ ದೂರದಲ್ಲಿದೆ ಎಂದರೆ ನಿಜ. ಠಾಣೆಯಿಂದ ನ್ಯಾಯಾಲಯಕ್ಕೆ ಬರಲು 15 ನಿಮಿಷ ಬೇಕು ಎಂದರೆ ಸಾಕ್ಷಿ ಅರ್ಧ ಗಂಟೆ ಬೇಕು ಎಂದು ಹೇಳುತ್ತಾರೆ. ಸಿಪಿಸಿ 3075 ಚೌಗುಲ ಇವರ ಮೂಲಕ ಪ್ರಥಮ ವರ್ತಮಾನ ವರದಿಯನ್ನು ಕಳುಹಿಸಿರುತ್ತೇನೆ. ದೂರಿನಲ್ಲಿ ಆರೋಪಿತರ ಹೆಸರು ಮತ್ತು ಊರಿನ ಹೆಸರು ಇಲ್ಲ ಎಂದರೆ ನಿಜ. ಹೆಸರು ವಿಳಾಸ ನಮೂದು ಇರಲಿಲ್ಲ ಎಂದು ಹೇಳುತ್ತಾರೆ. ಚಾಸಾ-10 ಮತ್ತು 11 ಇವರ ಮೂಲಕ ಚಾಸಾ-1 ಇವರು ಆರೋಪಿತರ ಹೆಸರು ಮತ್ತು ವಿಳಾಸ ತಿಳಿದುಕೊಳ್ಳಬಹುದು ಎಂದರೆ ಅದನ್ನು ಚಾಸಾ-1 ರವರಿಗೆ ಕೇಳಬೇಕು ಎಂದು ಹೇಳುತ್ತಾರೆ. ಚಾಸಾ-1 ಮತ್ತು ನಾನು ಕೂಡಿಕೊಂಡು ರಾಜಕೀಯ ಪ್ರಭಾವಕ್ಕೊಳಗಾಗಿ ಸುಳ್ಳು ದೂರನ್ನು ರಿಜಿಸ್ಟರ್ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸರಿಯಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**ಸಹಿ/-**

**(ಆದಿತ್ಯ ಆರ್. ಕಲಾಲ್)**

**ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**